ಹೇಳಿ ನಾನು ತಮ್ಮ ಮನಸ್ಸನ್ನು ಒಲಿಸಿಲಿಕ್ಕೆ ಪ್ರಯತ್ನ ಮಾಡುತ್ತಾ ನಾನು ಸರ್ಕಾರವನ್ನು ಕೇಳುವುದು ಏನೆಂದರೆ ಈ ಪಿ.ಯು. ಮಂಡಳಿಯಲ್ಲಿ ಬಹಳ ಕೊಳಕು ಇದ್ದಹಾಗೆ ಕಾಣುತ್ತಿದೆ. ಅದಕ್ಕೋಸ್ಕರವಾಗಿ ಒಬ್ಬ ಹೈಕೋರ್ಟ್ ನ್ಯಾಯಾಧೀಶರಿಂದ ಇದರ ಬಗ್ಗೆ ತನಿಖೆ ಮಾಡಲಿಕ್ಕೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ ಹೈಕೋರ್ಟ್ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಿದಾಗ ಅನೇಕ ಸಂಗತಿಗಳು ಹೊರಗಡೆ ಬಂದಿವೆ. ಆದ್ದರಿಂದ ಅವರಿಂದ ತನಿಖೆ ಮಾಡಿಸಿದರೆ ಹಿಂದೆ ಆಗಿರುವಂಥಾದ್ದು ಮುಂದೆ ಆಗುವಂಥಾದ್ದು ಎಲ್ಲ ಬರುತ್ತದೆ. ಅದಕ್ಕೋಸ್ಕರ ನಾನು ಈ ಬಗ್ಗೆ ಒತ್ತಾಯ ಮಾಡುತ್ತೇನೆ.

MR. SPEAKER:The speaker may in fit case postpone consideration of a notice of adjaurnment without prejudice to the claim of the member to raise an urgent matter.... ಆದ್ದರಿಂದ I am postponing so that I can listen to the Minister and I can apply my mind. ಆಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಅಧ್ಯಕ್ಷರೇ, ನಾನೊಂದು.....

ಅಧ್ಯಕ್ಷರು : ನಿಮ್ಮ ಅಡ್ಜರ್ನಮೆಂಟ್ ಮೋಶನ್‌ಗೆ ರೂಲ್ 61

ವಿಷಯ: ದಾಂಡೇಲಿ ಪೇಪರ್ ಮಿಲ್ಲಿನ ಕಾರ್ಮಿಕರ ಮುಷ್ಕರದ ಬಗ್ಗೆ.

+ ಶ್ರೀ ಆರ್.ವಿ. ದೇಶಪಾಂಡೆ : ನಾನು ಒಪ್ಪಿಕೊಳ್ಳುತ್ತೇನೆ, ನನಗೆ ಗೊತ್ತು; ಒಂದು ದಿನದಲ್ಲಿ ಒಂದು ನಿಲುವಳಿ ಸೂಚನೆ ಮಾತ್ರ ತೆಗೆದುಕೊಳ್ಳಬೇಕೆಂಬುದು ನನಗೆ ಗೊತ್ತು. ಆದರೆ ಇದು ಏನಾಗಿದೆ ಎಂದರೆ ಇವತ್ತು ದಾಂಡೇಲಿಯಲ್ಲಿ ಪೇಪರ್ ಮಿಲ್‌ನ ಕಾರ್ಮಿಕರು ಶಾಂತಿಯುತವಾಗಿ 20ನೇ ತಾರೀಖು ಗುರುವಾರದಿಂದ ತಮ್ಮ ಬೋನಸ್ ಡಿಮ್ಯಾಂಡ್ ಬಗ್ಗೆ ಮುಷ್ಕರ ಮಾಡುತ್ತಿದ್ದಾರೆ. ಆದರೆ 23ನೇ ತಾರೀಖು ರವಿವಾರ ಮುಂಜಾನೆ ಒಂದು ಗಂಟೆಗೆ ದಾಂಡೇಲಿಯ ಡಿ.ವೈ.ಎಸ್.ಪಿ ಮತ್ತು ಅವರ ಸಿಬ್ಬಂದಿಯವರು ಅಮಾನುಷವಾಗಿ ಈ ಕಾರ್ಮಿಕರ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ. ಇವತ್ತು ಎಷ್ಟೋ ಮಂದಿ ಕಾರ್ಮಿಕರು ಈ ಲಾಠಿಚಾರ್ಜ್‌ನಿಂದ ಗಾಯಗೊಂಡಿದ್ದಾರೆ. ಇವರಲ್ಲಿ ಹೆಣ್ಣುಮಕ್ಕಳು ಕೂಡ ಇದ್ದಾರೆ. ನನಗೆ ತಂತಿ ಮೂಲಕ ಸಂದೇಶ ಬಂದನಂತರ ಭಾನುವಾರ ದಿವಸ ನಾನು ಅಲ್ಲಿಗೆ ಹೋಗಿಬಂದೆ ಅವರಿಗೆ ಟ್ರೀಟ್‌ಮೆಂಟ್ ಕೂಡ ಕೊಟ್ಟಿಲ್ಲ. ನಾನೇ ಡಾಕ್ಟರ್‌ನ್ನು ಕರೆಸಿ ನೀವು ಸರ್ಟಿಫಿಕೇಟ್ ಕೊಡಬೇಕೆಂದು ಹೇಳಿದಾಗ ಅವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಿಸುತ್ತಿದ್ದೇನೆ. ಇವತ್ತು ಇದು ನಾನು ಜನತಾದಳದಿಂದ ರೈಸ್ ಮಾಡುತ್ತಿಲ್ಲ. ದಾಂಡೇಲಿಯಲ್ಲಿ ಕಾಂಗ್ರೆಸ್ ಪಕ್ಷದವರು ಸಹ ಒಂದು ಬಂದ್‌ಗೆ ಕಾಲ್ ಕೊಟ್ಟಿದ್ದಾರೆ ಬಿ.ಜೆ.ಪಿ.ಯವರು, ಕಾಂಗ್ರೆಸ್, ಜನತಾದಳದವರು ಎಲ್ಲರೂ ಸೇರಿ ಬಂದ್‌ಗೆ ಕರೆಕೊಟ್ಟು ಇವತ್ತು ಸೋಮವಾರ ಬಂದ್ ಆಗಿದೆ. ಇದು ಇಷ್ಟಕ್ಕೆ ನಿಂತಿಲ್ಲ. ಲಾಠಿಚಾರ್ಜ್ ಮಾಡಿ ಪುನಃ ಲೇಬರ್‌ಲೀಡರ್ಸ್ ಮೇಲೆ ಫಾಲ್ಸ್ ಕೇಸ್‌ಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಮತ್ತು ಅವರನ್ನು ಜೈಲಿನಲ್ಲಿಟ್ಟರು. ನಂತರ ಅವರನ್ನು ಬಿಡುಗಡೆ ಮಾಡಿಸಬೇಕಾದರೆ ಸೋಮವಾರ ಕೋರ್ಟ್ ಬಂದ್ ಇತ್ತು. ಆದ್ದರಿಂದ ಮಂಗಳವಾರ ದಿವಸ ಅವರನ್ನು ಬಿಡುಗಡೆ ಮಾಡಿಸಬೇಕಾಯಿತು. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ಯಾವ ಪ್ರಕಾರ ಅಮಾನುಷವಾಗಿ ಲಾಠಿ ಚಾರ್ಜ್ ಆಗಿದೆ ಇದಕ್ಕೆ ಕಾರಣರಾದ ಈ ದಾಂಡೇಲಿಯ ಡಿ.ವೈ.ಎಸ್.ಪಿ.ಯವರನ್ನು ಕೂಡಲೇ ಟ್ರಾನ್ಸ್‌ಫರ್ ಮಾಡಬೇಕು ಮತ್ತು ಸರ್ಕಾರ

ಇದರ ಬಗ್ಗೆ ತನಿಖೆ ಮಾಡಬೇಕು. ಮತ್ತು ತನಿಖೆಗೆ ಯಾವ ಜಡ್ಜ್ ಅಥವಾ ಆಫೀಸರ್ ಬೇಡ. ಕಾಂಗ್ರೆಸ್ ಪಕ್ಷದ ಶಾಸಕರು ದಾಂಡೇಲಿಗೆ ಹೋಗಿ ಕಾರ್ಮಿಕ ಮುಖಂಡರನ್ನು ಭೇಟಿಯಾಗಿ, ಈ ಅಮಾನುಷ ಕೃತ್ಯ ನಡೆದಿದೆಯೇ ಇಲ್ಲವೇ, ಪಾಲ್ಸ್ ಕೇಸ್ ಹಾಕಿದ್ದಾರೆಯೇ, ಇಲ್ಲವೇ ಎಂಬುದರ ಬಗ್ಗೆ ವಿಚಾರ ಮಾಡಲಿ ಒಂದುವೇಳೆ ಅವರ ವಿಚಾರಣೆಯಲ್ಲಿ ಲಾಠೀಚಾರ್ಜ್ ಆಗಿದೆ. ಅಮಾನುಷವಾಗಿ ವರ್ತಿಸಿದ್ದಾರೆ ಎಂದು ಹೇಳಿದರೆ ಆ ಪೊಲೀಸ್ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕ್ರಿಮಿನಲ್ ಕೇಸ್‌ಗಳನ್ನು ಏನು ಹಾಕಿದ್ದಾರೆ ಅವುಗಳನ್ನು ಕೂಡಲೇ ವಿತ್‌ಡ್ರಾ ಮಾಡಬೇಕು ಮತ್ತು ಯಾವ ಕಾರ್ಮಿಕರು ಗಾಯಗೊಂಡಿದ್ದಾರೆ ಅವರಿಗೆ ಸರ್ಕಾರದಿಂದ ಕಾಂಪನ್‌ಷೇಶನ್ ಕೊಡುವ ವ್ಯವಸ್ಥೆ ಆಗಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈ ಬೋನಸ್ ಸೆಟಲ್‌ಮೆಂಟ್ ಬಗ್ಗೆ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಬೇಕು. ಏಕೆಂದರೆ ದಾಂಡೇಲಿ ಪೇಪರ್ ಮಿಲ್‌ನಲ್ಲಿ ನೇರವಾಗಿ ನಾಲ್ಕೈದು ಸಾವಿರ ಕಾರ್ಮಿಕರು ಕೆಲಸ ಮಾಡಿದರೂ, ಇಂಡೈರೆಕ್ಟ್ ಮತ್ತು ಡೈರೆಕ್ಟ್ ಎಂಪ್ಲಾಯ್‌ಮೆಂಟ್‌ನಲ್ಲಿರುವವರನ್ನು ಸೇರಿ ಸುಮಾರು ಹತ್ತು ಸಾವಿರ ಜನರು ಇದ್ದಾರೆ. ಇವತ್ತು ಇದೆಲ್ಲ ಸ್ಟ್ಯಾಂಡ್‌ಸ್ಟಿಲ್ ಆದ್ದರಿಂದ ಸರ್ಕಾರ ಕೂಡಲೇ ಇಂಟರ್‌ವೀನ್ ಆಗಬೇಕು. ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ ಕಳೆದ ಏನು ವರ್ಷಗಳಿಂದ

ಅಧ್ಯಕ್ಷರು : ನೀವು ವಿವರಗಳಿಗೆ ಹೋಗುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಅಲ್ಲಿ ಕಳೆದ ಏಳು ವರ್ಷಗಳಲ್ಲಿ ಒಂದು ಸ್ಟ್ರೈಕ್ ಕೂಡ ನಡೆದಿಲ್ಲ, ಲಾಠಿಚಾರ್ಜ್ ಮಾಡಿದ್ದಿಲ್ಲ. ಈ ಸರ್ಕಾರ ಬಂದನಂತರ

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಇವತ್ತು ಆ ಕಾರ್ಮಿಕರಿಗೆ ರಕ್ಷಣೆ ಇಲ್ಲ ಈ ಪ್ರಕರಣದ ಬಗ್ಗೆ ತನಿಖೆಯಾಗಬೇಕು.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಂಡೇಲಿ ಪೇಪರ್ ಮಿಲ್ ಕಾರ್ಮಿಕರ ಬಗ್ಗೆ ನೂರಾರು ಟೆಲಿಗ್ರಾಮ್‌ಗಳು ಬಂದಿವೆ. ಬೋನಸ್ ಕೊಡುವ ಬಗ್ಗೆ ಅವರು ತಮ್ಮ ನ್ಯಾಯಬದ್ಧವಾದ ಬೇಡಿಕೆ ಬಗ್ಗೆ ಕೇಳಿದರೆ ಡಿ.ವೈ.ಎಸ್.ಪಿ.ಯವರು ಲಾಠೀಚಾರ್ಜ್ ಮಾಡಿ ಅಮಾನುಷವಾಗಿ ವರ್ತಿಸುವ ಅಗತ್ಯ ಏನಿತ್ತು? ದಯಮಾಡಿ ಅಲ್ಲಿನ ಡಿ.ವೈ.ಎಸ್.ಪಿ. ಯವರನ್ನು ಅಲ್ಲಿಂದ ವರ್ಗಾವಣೆ ಮಾಡಬೇಕು..

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ ಅಲ್ಲಿ ಪೊಲೀಸ್ ಸ್ಟೇಷನ್ನಿನೊಳಗೆ ಕಾರ್ಮಿಕರ ಬೇಡಿಕೆ ಬಗ್ಗೆ ಕಾರ್ಮಿಕರ ಪ್ರತಿನಿಧಿಗಳು ಮತ್ತು ಮಾಲೀಕರ ಜೊತೆ ಸಂಧಾನ ನಡೆದಿದೆಯೇ ಹೊರತು ಹೊರಗಡೆ ನಡೆದಿಲ್ಲ ಪೊಲೀಸ್ ಸ್ಟೇಷನ್ನಿನೊಳಗೆ ಸಂಧಾನ ನಡೆದಿದೆ. ಎನ್ನತಕ್ಕ ಆರೋಪ ಇದೆ ಮತ್ತು ಒತ್ತುಯದಿಂದ ಸಂಧಾನ ಮಾಡಿರುವುದರಿಂದ ಇಂತಹ ವಿಕೋಪ ಪರಿಸ್ಥಿತಿ ಉಂಟಾಗಿದೆ. ನೂರಾರು ಜನರು ಗಾಯಗೊಂಡಿದ್ದಾರೆ. ಅವರ ಬಗ್ಗೆ ಇವತ್ತಿನ ದಿವಸ ನಾವು ಆಲೋಚನೆ ಮಾಡಬೇಕಾಗಿದೆ. ಶಾಶ್ವತ ಪರಿಹಾರ ಕಂಡುಹಿಡಿಯಬೇಕು ಮತ್ತು ಇದರ ಬಗ್ಗೆ ವಿಚಾರಣೆ ಆಗಬೇಕು. ಪೊಲೀಸಿನವರು ನೇರವಾಗಿ ಮಾಲೀಕರ ಜೊತೆ ಶಾಮೀಲಾಗಿ ಕಾರ್ಮಿಕರ ಸಂಘಟನೆಯನ್ನು ಒಡೆಯುವಂತಹ ಕೆಲಸ ಮಾಡಿದ್ದಾರೆ. ಇದು ದುರಾದೃಷ್ಟಕರ ಸಂಗತಿ ಪೊಲೀಸರ

ಮೇಲೆ ನೇರವಾದ ಆರೋಪ ಇದೆ. ಅವರು ದೌರ್ಜನ್ಯದಿಂದ ಮಧ್ಯೆ ರಾತ್ರಿ ಒಂದು ಗಂಟೆಯಲ್ಲಿ ಕಾರ್ಖಾನೆಯೊಳಗೆ ನುಗ್ಗಿ ನೌಕರರನ್ನು ಥಳಿಸುವಂಥ ಕಾರ್ಯ ಮಾಡಿದ್ದಾರೆ. ಇದರ ಬಗ್ಗೆ ವಿಚಾರಣೆಯಾಗಬೇಕೆಂದು ಒತಾಯದಿಂದ ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿ.ವೈ.ಎಸ್.ಪಿ. ಮಾಲೀಕರ ಪರವಾಗಿದ್ದಾರೆ.

ಅಧ್ಯಕ್ಷರು : ನಿಮ್ಮ ನಿಲುವಳಿ ಸೂಚನೆ, ಅವರಿಗೆ 61ನೇ ವಿಧಿನಿಯಮ ಹೇಗೆ ಅಪ್ಲೈ ಆಗುತ್ತದೆಯೋ, ಅದು ನಿಮಗೂ ಅಪ್ಲೈ ಆಗುತ್ತದೆ. ಏಕೆಂದರೆ ಒಂದು ದಿನದಲ್ಲಿ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಏನು ಸೂಚನೆ ಕೊಟ್ಟರೂ ಸಹಿತ ಅದರಂತೆ ತಲೆಬಾಗಿ ನಡೆಯುವವನು ನಾನು ಇದು ತಮಗೂ ಗೊತ್ತಿದೆ.

ಅಧ್ಯಕ್ಷರು: ನನಗೆ ಅದರ ಬಗ್ಗೆ ಅಪಾರವಾದ ಮೆಚ್ಚುಗೆ ಇದೆ. ತಾವು ನಿಯಮ 61ನ್ನು ನೋಡಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರ ಮಾತಿಗೆ ನಾನೂ ಸಹ ತಲೆಬಾಗಿ ನಡೆಯುತ್ತೇನೆ. ದಾಂಡೇಲಿಯಲ್ಲಿ ನಡೆದಿರುವ ಘಟನೆ ಬಗ್ಗೆ ಸರ್ಕಾರ ಏನು ಹೇಳುತ್ತದೆ. ಅಲ್ಲಿ ಕಾರ್ಮಿಕರಿಗೆ ಅನ್ಯಾಯವಾಗಿರುವ ಬಗ್ಗೆ ಸರ್ಕಾರ ಏನು ಹೇಳುತ್ತದೆ

(ಗೊಂದಲ)

ಅಧ್ಯಕ್ಷರು : ನೀವು ಹೇಳುವುದನ್ನು ಹೇಳಿದ್ದೀರಿ. ಸರ್ಕಾರದವರು ನೋಡುತ್ತಾರೆ ಆದರೆ ನಿಮ್ಮ ನಿಲುವಳಿ ಸೂಚನೆಯನ್ನು ಒಪ್ಪಿಲ್ಲ. ನಿಲುವಳಿ ಸೂಚನೆ ಬಿಟ್ಟು ಬೇರೆ ರೀತಿಯಲ್ಲಿ ಏನಾದರೂ ಬರುತ್ತದೆಯೇ ಎಂಬುದನ್ನು ನೋಡೋಣ.

ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕಾನೂನು ಪರಿಸ್ಥಿತಿ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಾವು ಹೇಳಿರತಕ್ಕ ಸೂಚನೆಯನ್ನು ಒಪ್ಪಿ ಖಂಡಿತವಾಗಿಯೂ ಅದಕ್ಕೆ ತಲೆಬಾಗಿ ನಡೆಯುತ್ತೇನೆ. ಆದರೆ ಈಗ ನಾನು ಹೇಳುವ ವಿಷಯ ಬಹಳ ಮಹತ್ವದ್ದಾಗಿರುವುದರಿಂದ ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕಾನೂನು ಪರಿಸ್ಥಿತಿ ಬಿಗಡಾಯಿಸತಕ್ಕ ಸಂಭವ ಇರುವುದರಿಂದ ಮತ್ತು ನಾಳೆ ದಿನ ಅಧಿವೇಶನ ಮುಗಿಯುವ ಸಂದರ್ಭ ಇರುವುದರಿಂದ ಇದನ್ನು ಹೇಳಬೇಕಾಗಿವೆ. ಮಾನ್ಯ ಕೆ.ಹೆಚ್. ಪಾಟೀಲರು ಮುಖ್ಯವಾಗಿ ಆ ಭಾಗದ ಸಚಿವರೂ ಹಿರಿಯ ಮುಖಂಡರೂ ಆಗಿದ್ದಾರೆ. ಬೀಳಗಿ ತಾಲ್ಲೂಕಿನಲ್ಲಿ ಸುಮಾರು 10 ಕೋಟಿ ರೂಪಾಯಿ ಬೆಳೆ ಇದೆ. ಇನ್ನು 8 ದಿವಸದಲ್ಲಿ ಘಟಪ್ರಭಾ ಎಡದಂಡೆ ನಾಲೆಯಿಂದ ನೀರನ್ನು ಕೊಡದೇಹೋದರೆ ಆ 10 ಕೋಟಿ ರೂಪಾಯಿ ಬೆಳೆ ಹಾಳಾವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ.

ಅಧ್ಯಕ್ಷರು : ಈ ಬೀಳಗಿ ವಿಚಾರವನ್ನು ಬಾಬಾಗೌಡ ಪಾಟೀಲರೂ ಕಳುಹಿಸಿದ್ದಾರೆ ಇದು ಇವತ್ತು ಬರುವುದಿಲ್ಲ ನಾಳೆಗೆ ಗಮನ ಸೆಳೆಯುವ ಸೂಚನೆಗೆ ಬರುತ್ತವೆಯೋ ಏನೋ ನೋಡೋಣ ಇವತ್ತೇ ತೆಗೆದುಕೊಳ್ಳುವುದಕ್ಕೆ ಇನ್ನೂ ಅವರಿಗೆ ನಾವು ನೋಟೀಸ್ ಕಳುಹಿಸಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಳೆದ 4-5 ದಿವಸಗಳಿಂದ ಸಾವಿರಾರು ಜನ ರೈತರು ಈ ಬಗ್ಗೆ ಧರಣಿ ಕುಳಿತಿದ್ದಾರೆ ಇವತ್ತೂ ಧರಣಿ ಕುಳಿತಿದ್ದಾರೆ ನಿನ್ನೆಯೂ